

ಇನ್ನೇನು ಇಲ್ಲ. ಸುಮನಾ ಸತ್ತ ಮೇಲೆ ಬರವಣಿಗೆಯೇ ನಿಂತುಹೋಗಿತ್ತು.

ಏನು ಮಾಡಿದರೂ ಬರೆಯುವ ಮೂಡೇ ಬರುತ್ತಿರಲಿಲ್ಲ. ಬರೆಯುವ ಟೇಬಲ್ಲಿನ ಮೇಲೆ ಕುಳಿತು ಕಥೆಯ ಪಾತ್ರಧಾರಿಗಳ ಹೆಸರನ್ನು ಒಂದು ಹಾಳೆಯಲ್ಲಿ ಬರೆದುಕೊಂಡು ಕಥೆ ಬರೆಯಲು ಪ್ರಯತ್ನಿಸುತ್ತಿದ್ದರು. ಒಮ್ಮೆ ಯಶ್ವಂತರ ತರುಣ ಆತ್ಮೀಯರೊಬ್ಬರು ಯಾಕೆ ಹೀಗೆ ಎಂದು ಕೇಳಿದಾಗ ಪಾತ್ರಗಳ ಹೆಸರು ನೆನಪಾಗುವುದಿಲ್ಲವೋ ಅದಕ್ಕೆ ಬರೆದುಕೊಳ್ತಾ ಇದ್ದೇನೆ, ಮನುಷ್ಯನಿಗೆ ಬರೆಯುವುದಕ್ಕೆ ಆಗುವುದಿಲ್ಲ ಎಂದರೆ ಬದುಕುದೆಂತಕ್ಕೋ ಅನ್ನುತ್ತಿದ್ದರಂತೆ. ಒಬ್ಬ ಲೇಖಕ ಬದುಕುವುದೇ ಆತ ಸೃಷ್ಟಿಸಿದ, ಸೃಷ್ಟಿಸುವ ಪಾತ್ರಗಳ ಮೇಲೆ. ಅವರು ಏನೇ ಕೆಲಸ ಮಾಡುತ್ತಿರಲಿ, ಕಥೆ–ಕಾದಂಬರಿಯ ವಸ್ತು ತಂತ್ರವನ್ನು ಹೇಗೆ ಬಳಸಬೇಕೆಂದು ಯೋಚಿಸುತ್ತಿದ್ದರು. ಸುಮನಾ ಸತ್ತ ನಂತರ ಅವಳ ಮನಸ್ಸಿನ ಬಗೆಗೊಂದು ಕಥೆ ಬರೆಯಬೇಕೆನಿಸಿ ವರುಷದಿಂದ ಪ್ರಯತ್ನಿಸಿದ್ದಿದೆ. ಆದರೆ ಸಾಧ್ಯವಾಗಿರಲೇ ಇಲ್ಲ.

ಎಪ್ಪತ್ತರ ಆಸುಪಾಸಿನಲ್ಲಿರುವ ಯಶ್ವಂತರಿಗೆ ಮರೆವು ತೀವ್ರವಾಗಿ ಕಾಡುತ್ತಿರುವುದರಿಂದ ತನ್ನ ಮನೆ ಅವರಿಗೆ ವೃದ್ಧಾಶ್ರಮದಂತೆ ಕಂಡಿತು. ಮಕ್ಕಳಿಗೆ ಫೋನ್ ಮಾಡಬೇಕೆಂದು ಯೋಚಿಸಿ ಕೈ ಬಿಡುತ್ತಿದ್ದರು. ಏಕೆಂದರೆ ಹಿರಿಯ ಮಗ ಪ್ರವೀಣ ಬೆಂಗಳೂರಿನ ಪ್ರತಿಷ್ಠಿತ ಕಂಪನಿಯಲ್ಲಿದ್ದು, ಆಗಾಗ ಕಂಪನಿ ಕೆಲಸದ ನಿಮಿತ್ತ ವಿದೇಶ ಪ್ರಯಾಣದಲ್ಲೇ ಇರುತ್ತಾನೆ. ಕಿರಿಯ ಮಗ ಪ್ರಶಾಂತ ಕೂಡ ವರ್ಕ್ ಫ್ರಂ ಹೋಮ್‌ನಿಂದ ಹೊರಬಂದು ಇತ್ತೀಚೆಗೆ ಉನ್ನತ ಪ್ಯಾಕೇಜ್ ನೀಡುವ ಕಂಪನಿಯಲ್ಲಿ ಬಿಡುವಿಲ್ಲದ ಕೆಲಸದಲ್ಲಿದ್ದಾನೆ. ಮೊದಮೊದಲು ವಾರಕ್ಕೊಮ್ಮೆ ಫೋನ್ ಮಾಡುವ ಮಕ್ಕಳು ಈಗ ತಿಂಗಳಿಗೊಮ್ಮೆ ಮಾಡುತ್ತಿದ್ದಾರೆ. ಹೊಟ್ಟೆಬಟ್ಟೆ ಕಟ್ಟಿ, ಎಲ್ಲೂ ಸಾಲ ಮಾಡದೇ ಮಕ್ಕಳನ್ನು ಕಲಿಸಿದ್ದೆ ತಪ್ಪಾಯಿತೇ ಎಂದು ಯಶ್ವಂತರಿಗೆ ಅನಿಸಿದ್ದು ಇದೆ. ಇಲ್ಲಿಯೇ ಏನಾದರೊಂದು ಬ್ಯುಸಿನೆಸ್ಸೋ, ಸರಕಾರಿ ನೌಕರಿಯೋ ಮಾಡಿಕೊಂಡಿದ್ದರೆ ನಿವೃತ್ತಿ ನಂತರದ ದಿನಗಳಲ್ಲಿ ನಾನು ಹೀಗೆ ಏಕಾಂಗಿಯಾಗಿರುತ್ತಿದ್ದೆನೆ ಎಂದು ದಿನದಿನಕ್ಕೂ ಯೋಚಿಸಿದ್ದು ಇದೆ.

ಹೆಗ್ರೆಯ ಹತ್ತಿರದ ಹಾಲಕ್ಕಿ ಹೆಣ್ಣುಮಗಳು ನಿಂಗಿ ಅಡುಗೆ ಮಾಡಿಕೊಡಲು, ಕಸ ಗುಡಿಸಲು ಬರದಿದ್ದರೆ ನನ್ನ ಕಥೆ ಏನು? ನನ್ನ ಕಥೆಯೇ ಕಥೆಗೊಂದು ವಸ್ತುವಿನಂತಿದೆ ಎಂದು ಎಷ್ಟೋ ಸಲ ಯಶ್ವಂತರಿಗೆ ಅನಿಸಿದ್ದು ಇದೆ. ಸುಮನಾ ಇರುವಾಗಲೇ ಬರೆದ ಆತ್ಮಕಥನವು ಅಪೂರ್ಣವಾಗಿದೆ. ಅದಕ್ಕೆ 'ಯಶೋಮುಖಿ' ಎಂದು ಹೆಸರಿಟ್ಟು ಹತ್ತು ಕಂತುಗಳನ್ನು ಜಿಲ್ಲಾ ಪತ್ರಿಕೆಯೊಂದಕ್ಕೆ ಅಂಕಣ ರೂಪದಲ್ಲಿ ಬರೆದು ನಿಲ್ಲಿಸಿದ್ದರು. ಮುಂದೆ ಸುಮನಾ ಹೋದ ಮೇಲೆ ಅದು ನಿಂತುಹೋಯಿತು. ಹೆಂಡತಿಯ ಅಗಲುವಿಕೆ ತನ್ನನ್ನು ಇಷ್ಟು ಸೋಲಿಸುತ್ತದೆ ಎಂದು ಯಶ್ವಂತರು ಭಾವಿಸಿರಲಿಲ್ಲ.

ಅಂಗಳದಿಂದ ಒಳಗೆ ಹೋಗಿ ಟೇಬಲ್ಲಿನ ಮೇಲೆ ಕುಳಿತು ಪೆನ್ನು ಹಿಡಿಯುತ್ತಾರೆ. ಸುಮನಾಳ ನೆನಪು ಮಾಡಿಕೊಳ್ಳುತ್ತಾರೆ, ಆದರೆ ಏನೂ ನೆನಪಾಗಲಿಲ್ಲ. ಹಜಾರದಲ್ಲಿರುವ ಸುಮನಾಳ ಫೋಟೊ ಹತ್ತಿರ ನಿಂತು ವಿನಮ್ರನಾಗಿ ಬೇಡಿಕೊಂಡರು. ನಿನ್ನೊಂದಿಗಿನ ನೆನಪುಗಳ ಗುಚ್ಛವನ್ನು ಎಳೆಎಳೆಯಾಗಿ ಬಿಚ್ಚಿಡು, ನಿನ್ನ ಬಗೆಗಿನ ಕೊನೆಯ ಕಥೆಯೊಂದನ್ನು ಬರೆದು ಸಾಯುತ್ತೇನೆ ಎಂದು ಕೇಳಿಕೊಂಡರು. ನಗುತ್ತ ನಿಂತ ಸುಮನಾ ಏನೋ ಹೇಳಿದಂತೆ ಅನಿಸಿತು. ಆದರೆ, ಯಶ್ವಂತರಿಗೆ ಕೇಳಲೇ ಇಲ್ಲ.

ಅಲ್ಲಿಂದ ಆಚೆ ಬಂದ ಯಶ್ವಂತರು ಏನೇನೋ ಮಾತಾಡುತ್ತಲೇ ಇದ್ದರು. ಆದರೆ, ಕೇಳುವವರೇ ಇರಲಿಲ್ಲ. ಆಗಾಗ ಡ್ರೆಸ್ಸಿಂಗ್ ರೂಮಿನಲ್ಲಿದ್ದ ನಿಲುವುಗನ್ನಡಿಯಲ್ಲಿ ಅವಳ ರೂಪವನ್ನು ಹುಡುಕುವರು. ಆ ನಿಲುವುಗನ್ನಡಿಗೂ ಕೂಡ ಅವರ ವೃತ್ತಿಯಷ್ಟೇ ವಯಸ್ಸಾಗಿದೆ. ಮದುವೆಯಾದ ಹೊಸತರಲ್ಲಿ ಈ ಕನ್ನಡಿ ಮುಂದೆ ಸುಮನಾ ಅಂದಗೊಳ್ಳುವುದು, ತಾನು ಮುದ್ದಿಸುವುದೂ ಸದಾ ನಡೆದೇ ಇರುತ್ತಿತ್ತು. ಯಶ್ವಂತರಿಗೂ ಕನ್ನಡಿ ಜೊತೆಗೆ ಅಗಾಧ ಪ್ರಮಾಣದ ಸಂಬಂಧ ಒಡಮೂಡಿತ್ತು. ಈಗ ನಿಲುವುಗನ್ನಡಿ ಸುಮನಾಳ ರೂಪದ ಯಾವ ಕುರುಹೂ ಉಳಿಸಿಕೊಂಡಿಲ್ಲ. ಇಲ್ಲೂ ಕೂಡ ಅವಳ ನೆನಪು ಭಣಗುಡುತ್ತಿದೆ. ಅಡುಗೆ ಮನೆಯಲ್ಲಿ ಕೆಲಸದಾಕೆ ನಿಂಗಿ ಇದ್ದರೆ, ಅಲ್ಲಿಯೂ ಕೂಡ ಸುಮನಾಳ ನೆನಪುಗಳನ್ನು ಹೆಕ್ಕುವುದು ಕಷ್ಟ. ಎಷ್ಟೆಲ್ಲಾ ನೆನಪು ಮಾಡಿಕೊಂಡು ಅವಳ ಬಗ್ಗೆ ಕಥೆ ಬರೆಯಬೇಕೆಂದು ಎಷ್ಟೇ ಪ್ರಯತ್ನಿಸಿದರೂ, ಬರೆಯಲಾಗಲೇ ಇಲ್ಲ. ಮೊದಲಿನಂತೆ ಪಾತ್ರದ ಹೆಸರು ಬರೆಯುವುದಕ್ಕೆ ಕಥೆಯ ಪಾತ್ರಧಾರಿ ಹೆಂಡತಿ ಸುಮನಾಳೇ ಆಗಿದ್ದಾಳೆ. ಪಾತ್ರದ ಹೆಸರು ಬರೆದುಕೊಳ್ಳುವ ಹಾಗೂ ಇರಲಿಲ್ಲ. ಆದರೂ ಯಾಕೋ ಒಂದು ಸಾಲೂ ಕೂಡ ಬರೆಯಲಾಗುತ್ತಿಲ್ಲ ಅನಿಸಿ, ಯಶ್ವಂತರು ತುಂಬಾ ಇಳಿದುಹೋದರು. ಕನ್ನಡಿ ಎದುರು ನಿಂತು ನೋಡಿದರೆ ತುಂಬಾ ಸೊರಗಿದಂತೆ ಕಾಣಿಸುತ್ತಿದ್ದರು. ಸುಮನಾ ಇರುವಾಗ ಯಶ್ವಂತರಿಗೆ ನಿವೃತ್ತಿ ನಂತರವೂ ವಯಸ್ಸಾಗಿದೆ ಅಂತಾನೇ ಅನಿಸುತ್ತಿರಲಿಲ್ಲ. ಸುಮನಾ ಮಾಡುವ ಆರೋಗ್ಯಕರ ಅಡುಗೆ, ಪ್ರೀತಿ, ಕಾಳಜಿಯಿಲ್ಲದ ಈ ಕೆಲವು ತಿಂಗಳುಗಳು ಇಡೀ ಮನೆ ಖಾಲಿ ಖಾಲಿ ಇರುವಂತೆ ಕಾಣುತ್ತಿತ್ತು.

ಯಾವಾಗಲೂ ಪ್ರತಿದಿನ ದಾಡಿ ಮಾಡಿ ಕೆನ್ನೆ ನಯವಾಗಿರಿಸಿಕೊಳ್ಳುತ್ತಿದ್ದ ಯಶ್ವಂತರು ವಾರವಾದರೂ ತೆಗೆಯುತ್ತಿರಲಿಲ್ಲ. ವಾರದ ಗಡ್ಡ ಉಳಿಸಿಕೊಂಡು ಮೊದಲಿನ ಯಶ್ವಂತರಿಗೂ, ಈಗಿನ ಯಶ್ವಂತರಿಗೂ ಅಜಗಜಾಂತರ ವ್ಯತ್ಯಾಸ ಕಾಣುತ್ತಿದೆ. ಸಾಲದ್ದಕ್ಕೆ ಸಮ್ಮೇಳನಗಳು, ಸಾಹಿತ್ಯಿಕ ಕಾರ್ಯಕ್ರಮಗಳು ಕೊರೊನಾ ನಿಮಿತ್ತ ನಿಂತುಹೋಗಿದ್ದವು. ಅಕಾಡೆಮಿ ಮತ್ತು ಪರಿಷತ್ತುಗಳಿಂದ ಪತ್ರಗಳು ಬರುತ್ತಿರಲಿಲ್ಲ. ಸುಮಾರು ಹತ್ತು ಸಂಕಲನಗಳು, ಹನ್ನೆರಡು ಕಾದಂಬರಿಗಳನ್ನು ಬರೆದ ವ್ಯಕ್ತಿ ನಾನೇನಾ ಎಂಬಂತೆ ತಮಗೆ ತಾವೇ ಪ್ರಶ್ನಾರ್ಥಕವಾಗುತ್ತಿದ್ದರು. ಹಳೆಯ ಸಂಕಲನಗಳ ಬಗ್ಗೆ ವಿಮರ್ಶೆ ಬಂದಿದ್ದನ್ನು ಓದುವುದು ಬಿಟ್ಟರೆ ಬರೆಯಬೇಕೆಂಬ ಆಸೆ ಕಮರಿಹೋಗುತ್ತಿತ್ತು. ಜೀವಮಾನದ ಅನುಭವ, ಕಲ್ಪನಾ ಶಕ್ತಿ, ಬರವಣಿಗೆಯ ಪ್ರಭಾವ, ಸ್ಫೂರ್ತಿ, ವಸ್ತು ತಂತ್ರಗಳೆಲ್ಲ ಎಲ್ಲಿ ಹೋದವು? ಇನ್ನುಂದೆ ಬರೆಯುವುದು ಸಾಧ್ಯವೇ ಇಲ್ಲವೇ? ಎಂದು ಒಮ್ಮೊಮ್ಮೆ ಆತಂಕಕ್ಕೆ, ಅಸಹಾಯಕತೆಗೆ ಒಳಗಾಗುತ್ತಿದ್ದರು.

ಹೆಂಡತಿ ಸುಮನಾಳ ಫೋಟೊವನ್ನು ತಾವು ಬರೆಯುವ ಟೇಬಲ್ಲಿಗೆ ಒರೆಯಾಗಿಟ್ಟು ಸುಮಾರು ಹೊತ್ತಿನವರೆಗೆ ನೋಡುತ್ತಲೇ ಕುಳಿತಿದ್ದರು. ಸುಮನಾ ಬಾ ಎಂದು ಕರೆಯುವಂತೆ ಕಾಣಿಸುತ್ತಿತ್ತು. ಕನಸೋ...? ನಿಜವೋ...? ಎಂದು ಗೊತ್ತಾಗದೇ ಕುಸಿಯುತ್ತಿದ್ದರು. ಮೊಬೈಲ್ ಮಾತ್ರ ರಿಂಗಾಗುತ್ತಲೇ ಇತ್ತು. ಎತ್ತಿಕೊಳ್ಳುವಷ್ಟು ಶಕ್ತಿಯಿಲ್ಲದಂತೆ ಏನೋ ಒಂಥರಾ ನಿಶ್ಶಕ್ತಿ, ನಿರುತ್ಸಾಹ ಎದ್ದು ಕಾಣುತ್ತಿತ್ತು. ಬೆಳಗಿನ ತಿಂಡಿಯನ್ನು ಮಾಡದೆ ಎಷ್ಟೋ ಹೊತ್ತು ಯಾವುದೋ ಗಮನದಲ್ಲಿ ಕುಳಿತೇ ಇದ್ದರೂ ಏನೇನೋ ಬಡಬಡಿಸುತ್ತ. ಮಕ್ಕಳಿಗೂ ಕರೆ ಮಾಡದೇ ಗೆಳೆಯರನ್ನು ಕರೆಯಿಸಿಕೊಳ್ಳದೇ, ಮನೆಗೆಲಸದ ನಿಂಗಿಯನ್ನು ಕರೆಯದೇ ಒಂದು ತೊಟ್ಟು ನೀರನ್ನು ಕುಡಿಯದೇ ಟೇಬಲ್ಲಿನ ಮೇಲಿನ ಟಿಪ್ಪಣಿ ಪಟ್ಟಿ, ಎದುರಿನ ನಗುಮುಖದ ಸುಮನಾಳ ಫೋಟೊವನ್ನು ನೋಡುತ್ತಲೇ ಇದ್ದರು ಕುರ್ಚಿಗೊರಗಿ. ಡ್ರೆಸ್ಸಿಂಗ್ ರೂಮಿನಲ್ಲಿ ನಿಲುವುಗನ್ನಡಿ ಬಿದ್ದು ಚೂರುಚೂರಾದ ಸದ್ದು ಇಡೀ ರೂಮನ್ನು ಆವರಿಸಿತ್ತು.

ಪ್ರತಿಕ್ರಿಯಿಸಿ: **feedback@sudha.co.in**